## ಪದಲಹರಿ

'ವ್ಯರ್ಥವಲ್ಲ ತವತಪಸ್ಸು
ಮರದವಸಿಯ ಮೂರುತಿ.'
(ಪ್ರೇತವೃಕ್ಷ : ಅನಿಕೇತನ)

### ಶ್ರೀಸಾಮಾನ್ಯ

ಶ್ರೀಸಾಮಾನ್ಯ (ನಾ). ಸಾಧಾರಣವರ್ಗದ ವ್ಯಕ್ತಿ; ಜನಸಾಮಾನ್ಯ.

ಕುವೆಂಪು ಅವರು 1950ನೆಯ ಜನವರಿ 26ರ ಗುರುವಾರ ಭಾರತವು ಸರ್ವಪ್ರಜಾಧಿಪತ್ಯ(ರಿಪಬ್ಲಿಕ್)ವನ್ನು ಘೋಷಿಸಿದ ಸಂದರ್ಭದಲ್ಲಿ ರಚಿಸಿದ ಕವನ 'ಶ್ರೀಸಾಮಾನ್ಯ'ರ ದೀಕ್ಷಗೀತೆ. ಅವರು ಜನಸಾಮಾನ್ಯರನ್ನು 'ಶ್ರೀಸಾಮಾನ್ಯ' ಎಂಬ ಪದ ಸೃಷ್ಟಿಸಿ ಗೌರವಿಸಿದ್ದಾರೆ.

ಭಾರತ ಸ್ವತಂತ್ರ ಗಣತಂತ್ರ ದೇಶವಾಗಿದೆ. ಈ ದೇಶದ ಬಹುಜನರಾದ ಸಾಮಾನ್ಯರು ಗಣತಂತ್ರ ವ್ಯವಸ್ಥೆಯ ಪ್ರಮುಖರು. ಈ ದೇಶದ ಪ್ರಗತಿಯಲ್ಲಿ ಪ್ರತಿಪ್ರಜೆಯ ಪಾತ್ರವು ಮುಖ್ಯವೆಂಬ ಅರಿವನ್ನುಂಟುಮಾಡಿ ದೀಕ್ಷಾಬದ್ಧನಾಗುವಂತೆ ಕುವೆಂಪು ಈ ಗೀತೆಯನ್ನು ರಚಿಸಿದ್ದಾರೆ. ಸಾಮಾನ್ಯತೆ ಭಗವಂತನ ರೀತಿಯಾಗಿದೆ ಮತ್ತು ಭಗವಂತನ ಪ್ರೀತಿಗೆ ಪಾತ್ರವಾಗಿದೆ. ಕವಿಯ ಚಿಂತನೆಯ ಪ್ರಕಾರ ಭಗವಂತನೆ ಸರ್ವೋತ್ತಮ ಸಾಮಾನ್ಯ. ಸಾಮಾನ್ಯನೆ ಸರ್ವೋತ್ತಮ ಶ್ರೀಮಂತ. ಸಾಮಾನ್ಯರ ಶ್ರೀಮನ್ ಮಾರ್ಗವೆಂದರೆ ಅಖ್ಯಾತಿ. ಹನಿಹನಿ ಸೇರುತ್ತ ಹರಿಯುವ ಜನಜನತಾ ಭಕ್ತಿಯೆ ಶ್ರೀಸಾಮಾನ್ಯರ ಶ್ರೀ ಶಕ್ತಿ.

'ಶ್ರೀಸಾಮಾನ್ಯ'ವೆ ಭಗವನ್ ಮಾನ್ಯಂ;
'ಶ್ರೀಸಾಮಾನ್ಯ'ನೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ!
* * *
ಅಖ್ಯಾತಿಯೆ ಸಾಮಾನ್ಯರ ಶ್ರೀಮನ್ ಮಾರ್ಗಂ
* * *
ಹನಿ ಹನಿ ಸೇರುತ ಹರಿಯುವ ಜನ ಜನತಾ ಭಕ್ತಿ
ತಾನದೆ ತಿಳಿಯಯ್ ಸಾಮಾನ್ಯರ ಶ್ರೀಶಕ್ತಿ.
('ಶ್ರೀಸಾಮಾನ್ಯ'ರ ದೀಕ್ಷಾಗೀತೆ: ಇಕ್ಷುಗಂಗೋತ್ರಿ)



### ಚೆಂಗಳ್ಳು

ಚೆಂಗಳ್ಳು (ನಾ). ಕೆಂಪು ಬಣ್ಣದ ಮದ್ಯ, ಹೆಂಡ.

[ಚೆಂ + ಕಳ್ಳು ( < ಕಳ್)]

ರತಿಯಿಚ್ಛೆಯಿಂದ ರತಿಯೆಡೆಗೆ ಸಾಗುವ ಮನ್ಮಥನಂತೆ ದಶರಥನು ಕೈಕೆಯನ್ನು ಕಾಣಲು ಹೋಗುತ್ತಿದ್ದನು. ಅವಳ ಚೆಲುವು ಅವನ ಮತಿಗೆ 'ಚೆಂಗಳ್ಳು' ಆಯಿತು ಎಂದು ಕುವೆಂಪು ಅವರು ಆ ಸಂದರ್ಭಕ್ಕೆ ಸೂಕ್ತ ಪದ ಸೃಷ್ಟಿಸಿ ಬಣ್ಣಿಸಿದ್ದಾರೆ. 'ಚೆಂಗಳ್ಳು' ಕೆಂಪು ಬಣ್ಣದ ಮದ್ಯ. ಕೈಕೆ ಕೆಂಪಾದ ಚೆಲುವೆ. ಸೌಂದರ್ಯದ ಮದ್ಯ ಕುಡಿದ, ಮತ್ತನ್ನುಂಟುಮಾಡುವ ರೂಪಕವಾಗಿಯೂ ಚೆಂಗಳ್ಳು ಪದ ಪ್ರಯೋಗವಾಗಿದೆ.

'ವೇಣು ವೀಣೆಗಳಿಂಪುದನಿ ಕರ್ಣಕಮೃತಮಂ
ಸೂಸುತಿರೆ, ಚೆಲ್ವು ಚೆಂಗಳ್ಳಾಯ್ತು ನರಪತಿಯ
ಮತಿಗೆ'
(ಶ್ರೀ ರಾಮಾಯಣ ದರ್ಶನಂ. 1.3:350–3)